# ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀ ರುಕ್ಕನಗೌಡ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಯಡ್ತರೆ ಗ್ರಾಮ ಪಂಚಾಯಿತಿ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ, ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕೆ.ಸಿ.ಎಸ್(ಸಿ.ಸಿ.ಎ) ನಿಯಮಾವಳಿಗಳು 1957ರ ನಿಯಮ 14-ಎ ಅಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಬಗ್ಗೆ ಆದೇಶ.

**ಓದಲಾಗಿದೆ:**

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪತ್ರ ಸಂಖ್ಯೆ:ಕಂಪ್ಲೆಂಟ್/ಉಪಲೋಕ್/ಎಂ.ವೈ.ಎಸ್-1328/2017/ಪಿಪಿ, ದಿನಾಂಕ:20.12.2018.

**ಪ್ರಸ್ತಾವನೆ :**

ಈ ಪ್ರಕರಣದಲ್ಲಿ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಪತ್ರದ ಸಂಗಡ ಲಗತ್ತಿಸಿರುವ ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯ್ದೆ ಪ್ರಕರಣ 12(3)ರ ಅಡಿಯಲ್ಲಿ ಸಲ್ಲಿಸಿರುವ ವರದಿಯಲ್ಲಿ,-

ಶ್ರೀ ರಾಜೀವ್ ಹೆಗ್ಡೆ ಬಿನ್ ತೇಜಪ್ಪ ಹೆಗ್ಡೆ, ನೀರಜಡ್ಡು, ಕುಲ್ಲಂಜೆ ಗ್ರಾಮ, ಶಂಕರ ನಾರಾಯಣ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ(ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ)ರವರು ಈ ದೂರನ್ನು, (1) ಶ್ರೀ ರುಕ್ಕನಗೌಡ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಯಡ್ತರೆ ಗ್ರಾಮ ಪಂಚಾಯತ್, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ಮತ್ತು (2) ಶ್ರೀ ಚೆನ್ನಪ್ಪ ಮೊಯಲಿ, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ(ಇನ್ನು ಮುಂದೆ '1 ಮತ್ತು 2ನೇ ಎದುರುದಾರರು)ರವರುಗಳ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

**ದೂರಿನ ಸಂಕ್ಷಿಪ್ತ ವಿವರ:**

ಕುಂದಾಪುರ ತಾಲ್ಲೂಕು, ಕುಲ್ಲಂಜೆ ಗ್ರಾಮದ ಸರ್ವೆ ನಂ: 148/2ರಲ್ಲಿ 0.31 ಎಕರೆ ಸ್ಥಳವು ಪಿರ್ಯಾದುದಾರರ ಹೆಂಡತಿಯ ಹೆಸರಿನಲ್ಲಿದ್ದು, ಸದರಿ ಸ್ಥಳವು ಕುಲ್ಲಂಜೆ ಗ್ರಾಮದ ನೀರುಜಡ್ಡು ಜನತಾ ಕಾಲೋನಿಯಲ್ಲಿ ಇರುವುದಾಗಿದೆ. ಪಿರ್ಯಾದುದಾರರು ಮನೆಗೆ ಬರಲು ಈ ಕಾಲೋನಿ ಮುಖಾಂತರ 15 ಫೀಟ್ ಸಾರ್ವಜನಿಕ ರಸ್ತೆ ಇದ್ದು, ರಸ್ತೆ ಇಕ್ಕಲ್ಲಗಳಲ್ಲಿ ವಾಸ್ತವ್ಯದ ಮನೆಗಳಿದ್ದು, ಸದರಿ ರಸ್ತೆ ಪಕ್ಕ ಸತ್ಯಮ್ಮ ಆಚಾರ್ತಿ ಎನ್ನುವವರು ಸರ್ವೆ ನಂ:148/1ಪಿ3 ಜಮೀನಿನಲ್ಲಿ ಹೊಸದಾಗಿ ಮನೆ ನಿರ್ಮಾಣ ಮಾಡಿದ್ದು, ತಮ್ಮ ಮನೆಯ ತ್ಯಾಜ್ಯ ನೀರನ್ನು ಹರಿಯ ಬಿಡಲು ಸದರಿ ಸಾರ್ವಜನಿಕ ರಸ್ತೆಯನ್ನು ಚರಂಡಿಯಾಗಿ ಒತ್ತುವರಿ ಮಾಡಿಕೊಂಡಿರುತ್ತಾರೆ. ಒತ್ತುವರಿ ಮಾಡಿಕೊಂಡ ಸ್ಥಳದಿಂದ ಪಿರ್ಯಾದುದಾರರ ಮನೆಗೆ ಯಾವುದೇ ವಾಹನ ಬರಲು ಕಷ್ಟವಾಗಿರುತ್ತದೆ. ಈ ಬಗ್ಗೆ ಗ್ರಾಮ ಪಂಚಾಯತ್‌ಗೆ ಲಿಖಿತ ದೂರನ್ನು ನೀಡಿದ್ದು, ಸದರಿಯವರು ನೋಟೀಸು ಜಾರಿ ಮಾಡಿ, ಚರಂಡಿಗೆ ಪರ್ಯಾಯ ವ್ಯವಸ್ಥೆ ಮಾಡಲು ತಿಳಿಸಿರುತ್ತಾರೆ. ನೋಡಲ್ ಅಧಿಕಾರಿಯವರು ಸ್ಥಳಕ್ಕೆ ಬಂದು, ಸ್ಥಳ ಪರಿಶೀಲನೆ ಮಾಡಿ, ಸತ್ಯಮ್ಮ ಆಚಾರ್ತಿಯವರು ಸಾರ್ವಜನಿಕ ರಸ್ತೆಯನ್ನು ಒತ್ತುವರಿ ಮಾಡಿರುವುದಾಗಿ ವರದಿಯನ್ನು ಗ್ರಾಮ ಪಂಚಾಯತ್ ಶಂಕರನಾರಾಯಣಕ್ಕೆ ನೀಡಿರುತ್ತಾರೆ.

**ತನಿಖಾ ಅವಧಿಯಲ್ಲಿ ಕಂಡುಬಂದ ಅಂಶಗಳು:**

(1) ಕುಂದಾಪುರ ತಾಲ್ಲೂಕು, ಕುಳ್ಳಂಜಿ ಗ್ರಾಮದ ಸರ್ವೆ ನಂ:148/1ಪಿ3 ಜಮೀನಿನಲ್ಲಿ ಶ್ರೀಮತಿ ಸತ್ಯಮ್ಮ ಆಚಾರ್ತಿರವರು ಮನೆ ನಿರ್ಮಿಸಿದ್ದು, ನೀರುಜಡ್ಡು ಜನತಾ ಕಾಲೋನಿಯಲ್ಲಿ ಇರುವ 15 ಫೀಟ್ ಸಾರ್ವಜನಿಕ ರಸ್ತೆಯನ್ನು ಒತ್ತುವರಿ ಮಾಡಿ ಮನೆಯ ತ್ಯಾಜ್ಯ ನೀರನ್ನು ಸದರಿಯವರು ರಸ್ತೆ ಮೇಲೆ ಹರಿದು ಬಿಟ್ಟಿದ್ದು, ಕ್ರಮ ಜರುಗಿಸಲು ಕೋರಿ ಪಂಚಾಯತಿಗೆ ಅರ್ಜಿ ಸಲ್ಲಿಸಿದ್ದರೂ ಕ್ರಮ ಜರುಗಿಸಿಲ್ಲವೆಂದು ಆರೋಪಿಸಿ ದೂರು ಸಲ್ಲಿಸಿರುತ್ತಾರೆ.

(2) ಸದರಿ ಶ್ರೀಮತಿ ಸತ್ಯಮ್ಮ ಆಚಾರ್ತಿರವರಿಗೆ 1994-95ರಲ್ಲಿ 0.05 ಸೆಂಟ್ಸ್ ಮನೆ ನಿವೇಶನ ಮಂಜೂರಾಗಿದ್ದು, ಮನೆ ಕಟ್ಟಿಕೊಂಡಿರುತ್ತಾರೆ. ಸದರಿ ಮನೆಯನ್ನು ಪುನ: ರಚನೆ ಮಾಡಿದ್ದು, ಆ

ಸಂದರ್ಭದಲ್ಲಿ ಪಂಚಾಯತ್ ರಸ್ತೆ ಚರಂಡಿಯನ್ನು ಒತ್ತುವರಿ ಮಾಡಿ ಚರಂಡಿಯನ್ನು ಮುಚ್ಚಿರುತ್ತಾರೆ. ಈ ಬಗ್ಗೆ ಪಂಚಾಯತಿಯಿಂದ ದಿನಾಂಕ:30-08-2016ರಂದು ಹಾಗೂ 03-10-2017ರಂದು ನೋಟೀಸು ನೀಡಿದ್ದು, ಸದರಿ ಸತ್ಯಮ್ಮ ಆಚಾರ್ತಿರವರು ಚರಂಡಿಯನ್ನು ಪುನ: ನಿರ್ಮಿಸಲು ಯಾವುದೇ ಕ್ರಮ ಜರುಗಿಸಿರುವುದಿಲ್ಲ.

(3) 1ನೇ ಎದುರುದಾರರು ತಮ್ಮ ವರದಿಯಲ್ಲಿ ಮನೆ ಪುನ: ರಚನೆ ಮಾಡುವ ಸಂದರ್ಭದಲ್ಲಿ ಪಂಚಾಯಿತಿ ರಸ್ತೆ ಚರಂಡಿಯನ್ನು ಒತ್ತುವರಿ ಮಾಡಿ ಚರಂಡಿಯನ್ನು ಮುಚ್ಚಿರುವುದಾಗಿ ನಮೂದಿಸಿರುತ್ತಾರೆ.

(4) ಸದರಿ ಸತ್ಯಮ್ಮ ಅಚಾರ್ತಿರವರಿಗೆ ಸ್ಲಾಬ್ ಮನೆ ಕಟ್ಟಿಕೊಳ್ಳಲು ದಿನಾಂಕ:13.05.2015ರಿಂದ 12.05.2016ರವರೆಗೆ ಪರವಾನಗಿ ನೀಡಿದ್ದು ಹಾಗೂ ಮೊದಲನೆ ಮಹಡಿ ಕಟ್ಟಲು ಪರವಾನಗಿಯನ್ನು ದಿನಾಂಕ:17.11.2015ರಿಂದ 16.11.2016ರವರೆಗೆ ನವೀಕರಿಸಿರುವುದು ಕಂಡುಬಂದಿರುತ್ತದೆ.

(5) ಸದರಿ ಎರಡೂ ಪರವಾನಗಿ ಪ್ರತಿಗಳಲ್ಲಿ 1ನೇ ಎದುರುದಾರರ ಸಹಿಗಳಿದ್ದು ಕಟ್ಟಡವನ್ನು ನಿಯಮಬಾಹಿರವಾಗಿ ನಿರ್ಮಿಸಿದ ಅವಧಿಯಲ್ಲಿ 1ನೇ ಎದುರುದಾರರು ಶಂಕರನಾರಾಯಣ ಗ್ರಾಮದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾಗಿ ಹೆಚ್ಚುವರಿ ಪ್ರಭಾರವನ್ನು ಹೊಂದಿದ್ದು ದಿನಾಂಕ:28.11.2016ರವರೆಗೆ ಕರ್ತವ್ಯ ನಿರ್ವಹಿಸಿರುವುದು ಕಂಡುಬಂದಿರುತ್ತದೆ.

(6) ಒತ್ತುವರಿ ಮಾಡಿದ ಬಗ್ಗೆ ಕ್ರಮ ಜರುಗಿಸುವ ಹೊಣೆಗಾರಿಕೆ 1ನೇ ಎದುರುದಾರರದಿದ್ದು ಕಟ್ಟಡ ನಿರ್ಮಾಣದ ಹಂತದಲ್ಲಿಯೇ ನಿಯಮಾನುಸಾರ ಕ್ರಮ ಜರುಗಿಸದೇ 1ನೇ ಎದುರುದಾರರು ಕರ್ತವ್ಯಲೋಪ ಎಸಗಿರುವುದು ಕಂಡುಬಂದಿರುತ್ತದೆ.

ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವೆ(ನಡತೆ) ನಿಯಮ 1966ರ ನಿಯಮಗಳು 3(1)(ii) & (iii) ರನ್ವಯ 1ನೇ ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, 1ನೇ ಎದುರುದಾರರಾದ ಶ್ರೀ ರುಕ್ಕನಗೌಡ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಯಡ್ತರೆ ಗ್ರಾಮ ಪಂಚಾಯತ್, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ಇವರ ವಿರುದ್ಧ ಶಿಸ್ತು ನಡವಳಿಕೆ ಕ್ರಮ ಜರುಗಿಸಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ)ನಿಯಮಗಳು, 1957ರ ನಿಯಮ 14-ಎರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಲೋಕಾಯುಕ್ತ ಸಂಸ್ಥೆಗೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3)ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

ಶ್ರೀ ರುಕ್ಕನಗೌಡ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಯಡ್ತರೆ ಗ್ರಾಮ ಪಂಚಾಯತ್, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ಇವರು ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಪಾಲಿಸುವಲ್ಲಿ ವಿಫಲರಾಗಿ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರಿಕ ಸೇವಾ(ನಡತೆ) ನಿಯಮಗಳು, 1996 ನಿಯಮ 3(1)(ii) & (iii) ರನ್ವಯ ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ಅಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಬಹುದಾಗಿದೆ. ಮುಂದಿನ ಆದೇಶಕ್ಕಾಗಿ ಸಲ್ಲಿಸಿದೆ.

ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವೆ(ನಡತೆ) ನಿಯಮ 1966ರ ನಿಯಮಗಳು 3(1)(ii) & (iii) ರನ್ವಯ 2ನೇ ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, 2ನೇ ಎದುರುದಾರರಾದ ಶ್ರೀ ರುಕ್ಕನಗೌಡ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಯಡ್ತರೆ ಗ್ರಾಮ ಪಂಚಾಯಿತಿ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ, ಇವರ ವಿರುದ್ಧ ಶಿಸ್ತು ನಡವಳಿಕೆ ಕ್ರಮ ಜರುಗಿಸಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ)ನಿಯಮಗಳು, 1957ರ ನಿಯಮ 14-ಎರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಲೋಕಾಯುಕ್ತ ಸಂಸ್ಥೆಗೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3)ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಶ್ರೀ ರುಕ್ಕನಗೌಡ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಯಡ್ತರೆ ಗ್ರಾಮ ಪಂಚಾಯಿತಿ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ, ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ, ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು

ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ಅಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/99/ಗ್ರಾಪಂಕಾ/2019**
**ಬೆಂಗಳೂರು, ದಿನಾಂಕ: 04–07–2019**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ರುಕ್ಕನಗೌಡ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಯಡ್ತರೆ ಗ್ರಾಮ ಪಂಚಾಯಿತಿ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ, ಇವರು ಕರ್ನಾಟಕ ನಾಗರೀಕ ಸೇವಾ(ನಡವಳಿ) ನಿಯಮಗಳು 3(1)(ii) & (iii)ರನ್ವಯ "ದುರ್ನಡತೆ" ಎಸಗಿರುವುದು ಸಾಬೀತಾಗಿರುವುದರಿಂದ, ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಈ ಪ್ರಕರಣವನ್ನು ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ)ನಿಯಮಗಳು, 1957ರ ನಿಯಮ 14–ಎ ರ ಅಡಿಯಲ್ಲಿ ಮಾನ್ಯ ಉಪಲೋಕಾಯುಕ್ತರವರಿಗೆ ವಹಿಸಲಾಗಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ)ನಿಯಮಗಳು, 1957ರ ನಿಯಮ 8ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

4/7

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಪ್ರತಿಗಳು:**

1) ಮಹಾಲೇಖಪಾಲರು(ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು(ಮೂಲ ದಾಖಲೆಗಳು ಪುಟ ಸಂಖ್ಯೆ: 1 ರಿಂದ 25ನ್ನು ಇದರೊಂದಿಗೆ ಲಗತ್ತಿಸಿ ಹಿಂದಿರುಗಿಸಿದೆ).
4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಉಡುಪಿ ಜಿಲ್ಲೆ.
5) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ.
6) ಶ್ರೀ ರುಕ್ಕನಗೌಡ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಯಡ್ತರೆ ಗ್ರಾಮ ಪಂಚಾಯಿತಿ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ.
7) ಗಣಕ ಕೋಶ.
8) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.